Repairs of breached Tanks in Chikmagalur.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು–ಮೂಡಿಗೆರೆ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ :—

"18 ಸಾಮಾನ್ಯ ಹುಟ್ಟುವಳಿಯಿಂದ ಹಣ ವನ್ನೊದಗಿಸತಕ್ಕ ಇತರ ರೆವೆನ್ಯೂ ವೆಚ್ಚಗಳು ಎಂಬ ಬಾಬಿನಲ್ಲಿ ಕೋರಿರತಕ್ಕ 61,09,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಕಳೆದ ಮಳೆಗಾಲದಲ್ಲಿ ವಿಪರೀತ ಮಳೆ ಬಿದ್ದುದರಿಂದ ಒಡೆದು ಹೋದ ಕೆರೆಗಳನ್ನು ದುರಸ್ತಿ ಮಾಡುವುದಕ್ಕೆ ಕೂಡಲೆ ಕಾರ್ಯಕ್ರಮ ಕೈಕೊಳ್ಳ ಬೇಕೆಂದು ಸರ್ಕಾರದವರಿಗೆ ಒತ್ತಿ ತಿಳಿಸುವುದ ಕ್ಕಾಗಿ)."

ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತಾ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಕಳೆದ ವರ್ಷ ವಿಶೇಷವಾಗಿ ಮಳೆಯಾದುದರ ಪರಿಣಾಮವಾಗಿ ಕೆಲವು ಕೆರೆಗಳು ಒಡೆದುಹೋಗಿವೆ. ಅವುಗಳ ಪೈಕಿ ಬೆಳವಾಡಿ ಕೆರೆಯು ಒಂದಾಗಿದೆ. ಈ ಕೆರೆ ಕೆಳಗೆ ಬಹಳ ಅಚ್ಚುಕಟ್ಟಿದೆ. ಮಳೆಗಾಲ ನಮೂಪವಾಗುತ್ತಿದೆ. ಆದರೆ ಕೆರೆ ರಿಪೇರಿ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಮಳೆ ಪ್ರಾರಂಭವಾದ ಮೇಲೆ ಕೆಲಸ ನಲೀಸಾಗಿ ನಡೆಯುವುದು ಕಷ್ಟ. ಇಲಾಖೆಯವರನ್ನು ಕೇಳಿದರೆ ಸರ್ಕಾರ ಜಾಗ್ರತೆಯಾಗಿ ಸಲಕರಣೆಯನ್ನೊದಗಿಸಿಲ್ಲವೆಂದು ಹೇಳುತ್ತಾರೆ. ಕೆಲಸ ಪ್ರಾರಂಭವಾಗಿ ನಡೆಯುವುದಕ್ಕೆ ಪ್ರಾರಂಭವಾಯಿತು. ಆಮೇಲೆ ಪುನಃ ಟೆಂಡರು ಕರೆಯಲು ಆರ್ಡರ್ ಆಗಿ ಟೆಂಡರು ಬಂದು ಈಗ ತಾನೆ ಕೆಲಸ ಪುರುಮಾಡಿದ್ದಾರೆ. ಮಳೆಗಾಲ ಬರುವುದರೊಳಗಾಗಿ ಪೂರ್ತಿಯಾಗುತ್ತದೆಯೋ ಇಲ್ಲವೋ ಎಂಬ ಸಂಶಯ ಬಹಳವಾಗಿದೆ. ಒಂದು ವರ್ಷ ಕೆರೆ ತುಂಬಿದರೆ 5-6 ವರ್ಷಗಳು ಅನುಕೂಲವಾಗುತ್ತದೆ. ಆದ್ದರಿಂದ ಜಾಗ್ರತೆ ರಿಪೇರಿ ಮಾಡುವುದು ಆವಶ್ಯಕ. ಅಲ್ಲದೆ ಒಡೆದು ಹೋದ ಕೆರೆಗಳ ವಿಷಯದಲ್ಲಿ ಒಡೆಯಲು ಕಾರಣವನ್ನು ಪರಿಶೀಲಿಸಿದ್ದಾರೆ. ಆದರೆ ಈ ಬೆಳವಾಡಿ ಕೆರೆಯ ವಿಷಯದಲ್ಲಿ ಪರಿಶೀಲನೆ ಮಾಡಿದವರು ಏನು ಹೇಳಿದ್ದಾರೆ? ಒಡೆದು ಹೋದುದಕ್ಕೆ ಕಾರಣ ಗೊತ್ತಾಗಿಲ್ಲ. ಕೆಲವರು ವಿಧಾನಸೌಧಕ್ಕೆ ಪಚ್ಚೆಕಲ್ಲು ತೆಗೆದುದರ ಪರಿಣಾಮ ಎಂದಿದಾರೆ. ಅಂತೂ ಕಾರಣ ಗೊತ್ತಾಗಿಲ್ಲ. ಮಳೆಗಾಲ ನಮೂಪವಾಗುವುದರೊಳಗಾಗಿ ಈ ಕೆರೆ ಕೆಲಸ ಪೂರ್ತಿ ಮಾಡಬೇಕು. ಮದಗದಕೆರೆ, ಅಯ್ಯನಕೆರೆ ಇಂಥ ಕೆರೆಗಳು ಒಡೆದು ಹೋದರೆ ಸರ್ಕಾರಕ್ಕೆ ವಿಶೇಷ ನಷ್ಟವಾಗುತ್ತದೆ. ಅವುಗಳ ಏರಿಯೂ ಗಟ್ಟಿಯಾಗಿಲ್ಲ ಎಂದು ಹೇಳುತ್ತಾರೆ. ಅದ ಕ್ಕಾಗಿ ಸರ್ಕಾರ ಸಂಸ್ಥಾನದ ಎಲ್ಲಾ ಕಡೆ ಇರುವ ಕೆರೆಗಳ ಉಸ್ತುವಾರಿ ನೋಡಿಕೊಳ್ಳಲು ತಕ್ಕ ಸಿಬ್ಬಂದಿ ನೇಮಕ ಮಾಡುವುದು ಅಗತ್ಯವಾಗಿದೆ. ಸರ್ಕಾರದ ವರು ಆದಷ್ಟು ಜಾಗ್ರತೆ ಇದಕ್ಕೆ ತಕ್ಕ ಏರ್ಪಾಡು ಮಾಡಬೇಕು, ಉಪಯುಕ್ತ ಯಂತ್ರೋಪಕರಣಗಳನ್ನು ಒದಗಿಸಿ ಕೊಡಬೇಕು ಎಂದು ಪ್ರಾರ್ಥನೆಮಾಡಿ ನನ್ನ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved: "That the demand be reduced by Rs. 100".

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಹಿಂದೊಮ್ಮೆ ಒಂದು ಪ್ರಶ್ನೆ ಸಂಬಂಧದಲ್ಲಿ ಸಂಸ್ಥಾನಾಮಳೆ ಒಡೆದು ಹೋಗಿರುವ ಕೆರೆಗಳ ಸಂಖ್ಯೆಯನ್ನು ತಿಳಿಸಿದ್ದೆ. ಒಡೆದು ಹೋದ ಎಲ್ಲಾ ಕೆರೆಗಳನ್ನೂ ದುರಸ್ತು ಮಾಡಬೇಕೆಂದು ಈಗಾಗಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ, ಅಂದಾಜು ಕೂಡ ತಯಾರಾಗುತ್ತಿದೆ. ಶ್ರೀಮತಿ ಸುಬ್ಬಮ್ಮನವರು ಪ್ರಸ್ತಾಪ ಮಾಡಿರುವ ಬೆಳವಾಡಿಕೆರೆ ಒಂದು ಜೋಡೀಗ್ರಾಮದಲ್ಲಿದೆ. ಆ ಕೆರೆಯನ್ನು ನಾನು ಖುದ್ದಾಗಿ ನೋಡಿದೆ. ಹೆಚ್ಚಾಗಿ ಮಳೆ ಬಂದುದರಿಂದ ಒಡೆದುಹೋದ ಆ ಕೆರೆಯ ರಿಪೇರಿಗೆ ಈಗಾಗಲೆ ಸೂಕ್ತ ಕ್ರಮ ಕೈಕೊಳ್ಳಲಾಗಿದೆ. ಆದಷ್ಟು ಜಾಗ್ರತೆ ಒಡೆದುಹೋದ ಎಲ್ಲಾ ಕೆರೆಗಳನ್ನೂ ಮಾಡಬೇಕೆಂದು ಸರ್ಕಾರಕ್ಕೆ ಆಸೆಯಿದೆ. ಬೆಳವಾಡಿ ಕೆರೆಯ ಮಣ್ಣನ್ನು ಸಾಗಿಸಲು ಯಂತ್ರಕ್ಕೆ ಆರ್ಡರನ್ನು ಕೂಡ ಬೇಗ ಮಾಡಿ, ಅದು ಬಂದೊಡನೆ ಜಾಗ್ರತೆ ಆ ಕೆರೆ ದುರಸ್ತುಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನನ್ನ ಖೋತಾ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, with drawn.

Inadequate provision made for repair of tanks.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ :—

"18 ಸಾಮಾನ್ಯ ಹುಟ್ಟುವಳಿಯಿಂದ ಹಣ ವನ್ನೊದಗಿಸತಕ್ಕ ಇತರ ರೆವೆನ್ಯೂ ವೆಚ್ಚಗಳು ಎಂಬ ಬಾಬಿನಲ್ಲಿ ಕೋರಿರತಕ್ಕ 61,09,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ ನೂರು ರೂಪಾಯಿಗಳನ್ನು ಕಡಮೆ ಮಾಡಬೇಕು. (ಕೆರೆಗಳ ಜೀರ್ಣೋದ್ಧಾರಕ್ಕೂ ಮತ್ತು ದುರಸ್ತಿಗಳಿಗೂ ಒದಗಿಸಿರತಕ್ಕ ಗ್ಯಾಂಟುಗಳು ಸಾಕಾಗುವಂತಿಲ್ಲವೆಂಬ ವಿಚಾರ ದಲ್ಲಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ)."

ಮಾನ್ಯಮಂತ್ರಿಗಳು ಈಗ ಕೆರೆಗಳ ಜೀರ್ಣೋದ್ಧಾರಕ್ಕೂ ಮತ್ತು ರಿಪೇರಿಗೂ ಕೂಡ ಈ ನಾಲ್ಕು ವರ್ಷಗಳಿಂದ ಬಹಳ ಹಣವನ್ನು ಖರ್ಚು ಮಾಡಿದ್ದೇವೆ, ಸಾಧಿಸಿರತಕ್ಕಂಥ ಕೆಲಸ ಬಹಳ ಅಗಾಧವಾದುದು, ಬಹಳವಾಗಿ ಹೆಮ್ಮೆಪಟ್ಟು ಕೊಳ್ಳಬಹುದು ಎಂಬ ವಾದನರಣಿಯನ್ನು ಹೇಳಿದರು. ಆದರೆ ನನ್ನ ಅನುಭವದಲ್ಲಿ ಹಳ್ಳಿಗಳ ಕಡೆ ತಿರುಗುವಾಗ ಅಲ್ಲಿನ ರೈತರು ಹೇಳುತ್ತಿರುವ ದೂರುಗಳು ಮತ್ತು ಅಲ್ಲರತಕ್ಕಂಥ ಕೆರೆಗಳ ಸ್ಥಿತಿಗತಿಗಳು ಇವನ್ನು ನೋಡಿದರೆ ಈಗಲೂ ಕೂಡ ಸರ್ಕಾರದವರು ಈ ಕೆರೆಗಳ ಜೀರ್ಣೋದ್ಧಾರಕ್ಕೆ ಮತ್ತು ರಿಪೇರಿಗೆ ಸಾಕಾದಷ್ಟು ಗಮನವನ್ನು ಕೊಡುತ್ತಿಲ್ಲ, ಜನರ ನಿರೀಕ್ಷಣೆಯಂತೆ ಕೆಲಸ ನಡೆಯುತ್ತಿಲ್ಲ ಎಂದು ಖಚಿತವಾಗಿ ನಾನು ತಿಳಿಸ ಬಯಸುತ್ತೇನೆ.

ಮೈನರ್ ಕೆರೆಗಳ ಜೀರ್ಣೋದ್ಧಾರದ ಕೆಲಸ ಬಹಳ ಪ್ರಾಮುಖ್ಯವಾದುದು. ಅನೇಕ ಬಾಬುಗಳಿಗಿಂತಲೂ ಈ ಕೆರೆಗಳ ಜೀರ್ಣೋದ್ಧಾರ ಮಾಡಿದರೆ ದೇಶದ ಆರ್ಥಿಕಸ್ಥಿತಿ ಉತ್ತಮವಾಗಿ ಜನಗಳಲ್ಲೂ ಒಂದು

ನಮಾಧಾನವುಂಟಾಗುತ್ತದೆ. ಜನರಿಗೆ ಸರ್ಕಾರದ ಮೇಲೆ ನಂಬಿಕೆ ಹುಟ್ಟಬೇಕಾದರೆ ಕೆರೆಗಳ ಜೀರ್ಣೋದ್ಧಾರದ ಕೆಲಸವು ಕ್ಷಿಪ್ರವಾಗಿ ಆಗಬೇಕು, ಅದಕ್ಕೆ ಸರ್ಕಾರ ನಿಗಾ ಕೊಡಬೇಕಾದದ್ದೂ ಅದರ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಒಟ್ಟು ನಮ್ಮ ಸೀಮೆಯಲ್ಲಿ ಸುಮಾರು 22 ಸಾವಿರ ಚಿಲ್ಲರೆ ಕೆರೆಗಳಿವೆ, ಮಲೆನಾಡು ಪ್ರದೇಶದಲ್ಲಿ 13 ಸಾವಿರ ಚಿಲ್ಲರೆ ಕೆರೆಗಳಿವೆ, ಹಾಸನ ಜಿಲ್ಲೆಯಲ್ಲಿ ಸುಮಾರು 4 ಸಾವಿರ ಕೆರೆಗಳಿವೆ. ಪದೇಪದೇ ಹತ್ತಾರು ವರ್ಷಗಳಿಂದ ಅಸೆಂಬ್ಲಿ ಸದಸ್ಯರು ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಹೇಳಿದಾಗ ಅವರ ಪ್ರಶ್ನೆಗಳಿಗೆ ಉತ್ತರವಾಗಿ ಜೀರ್ಣೋದ್ಧಾರವಾಗಿರುವ ಕೆರೆಗಳ ಸಂಖ್ಯೆಯನ್ನು ತಿಳಿಸಿದ್ದಾರೆ. ಈಗ ಆ ಅಂಕಿ ಅಂಶ ನನ್ನಲ್ಲಿಲ್ಲ. ಆದರೆ ಅದರಲ್ಲಿ ಬಹು ಭಾಗದ ಕೆರೆಗಳು ಜೀರ್ಣೋದ್ಧಾರವಾಗಿಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಈ ವಿಷಯವನ್ನು ಬಹಳ ತೀವ್ರವಾಗಿ ನಾನು ಸರ್ಕಾರದ ಮುಂದೆ ಇಡುತ್ತಲೇ ಇದ್ದೇನೆ. ಆದರೂ ಕೂಡ ಒಂದು ಪ್ಲಾನ್ಡ್ ಬೇಸಿಸ್‌ಮೇಲೆ ಯಾವುದಾದರೂ ಒಂದು ಕಾಲಾವಧಿಯಲ್ಲಿ ಇಷ್ಟು ಕೆರೆ ರಿಪೇರಿ ಮಾಡುತ್ತೇವೆ, ಇಷ್ಟು ಜೀರ್ಣೋದ್ಧಾರ ಮಾಡುತ್ತೇವೆ ಎಂದು ಒಂದು ರೀತಿಯಲ್ಲಿ ಸಾಮಾನ್ಯವಾಗಿ ಸರ್ಕಾರದವರು ಕೆಲಸ ಮಾಡುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ಕೆಲಸ ನಡೆದಿದೆ, ಎಷ್ಟು ನಡೆಯಬೇಕಾಗಿತ್ತು ಎಂಬುದು ನನಗೆ ಗೊತ್ತಿದೆ, ಅದನ್ನು ನಾಗಾಲೋಟಕ್ಕೆ ಅಥವಾ ಈಗಿನ ಯಂತ್ರಯುಗದ ಕಾಲಕ್ಕೆ ಹೋಲಿಸಿದರೆ ಅದು ಒಡ್ಡರಬಂಡಿ ವೇಗದಲ್ಲಿ ಹೋಗುತ್ತಿದೆಯೆಂದು ಗೊತ್ತಾಗುತ್ತದೆ. ಇದು ಜನರಿಗೆಲ್ಲಾ ಗೊತ್ತಾಗಿದೆ. ಅರಕಲಗೂಡು ತಾಲ್ಲೂಕಿನ ಅನೇಕ ರೈತರು ಬಂದು ನಮ್ಮ ಕೆರೆಗಳ ಜೀರ್ಣೋದ್ಧಾರ ಕೆಲಸವಾಗಿಲ್ಲ, 10-15 ವರ್ಷಗಳಿಂದಲೂ ಕೂಡ ಕಾಂಟ್ರಿಬ್ಯೂಷನ್ ಕೊಟ್ಟರೂ ಸಹ ತಹಲ್‌ವರೆಗೂ ಜೀರ್ಣೋದ್ಧಾರ ಮಾಡಿಲ್ಲ, ರೈತರು ತಮ್ಮ ಮೇಲೆ ಬೀಳುವ ಖರ್ಚನ್ನು ಕೊಡಲು ಸಿದ್ಧರಾಗಿದ್ದರೂ ಮಾಡಬೇಕಾದ ಕೆಲಸಮಾಡಿಲ್ಲವೆಂದು ತಿಳಿಸಿದರು. ನಾನು ಈ ವಿಚಾರದಲ್ಲಿ ಎಗ್ಸಿಕ್ಯುಟಿವ್ ಇಂಜಿನಿಯರಿಗೂ ಸಹ ಕಾಗದ ಬರೆದಿದ್ದೇನೆ. ಎರಡು ವರ್ಷಗಳಾಗುತ್ತಾ ಬಂದಾಗ್ಯೂ ಕೂಡ ಅರಕಲಗೂಡು ತಾಲ್ಲೂಕನಲ್ಲಾಗಿರುವ ಪ್ರೋಗ್ರೆಸ್ ಏನೆಂಬುದೇ ತಿಳಿಯಲಿಲ್ಲ. ಇದನ್ನು ವ್ಯವನದಿಂದ ಹೇಳಬೇಕಾಗಿದೆ. ಯಾವ ಕೆಲಸ ನಿಧಾನವಾದರೂ ಪರವಾಗಿಲ್ಲ, ಕೆರೆಗಳ ಜೀರ್ಣೋದ್ಧಾರ ಮತ್ತು ರಿಪೇರಿ ನಿಧಾನವಾದರೆ ದೇಶಕ್ಕೆ ಬಹಳ ಅನ್ಯಾಯ; ಜನರಿಗೆ ಬಹಳ ಅನಮಾಧಾನವುಂಟಾಗುತ್ತದೆ.

ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳ ಹೈಕೆ ನಾಲ್ಕಾರು ಕೆಲಸಗಳನ್ನು ತೆಗೆದುಕೊಂಡಿದ್ದೀರಿ. ಇದಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚಾಗುತ್ತಿದೆ. ಅದಕ್ಕಿಂತಲೂ ಮುಖ್ಯವಾಗಿ ನಮ್ಮ ದೇಶದಲ್ಲಿ ಸಣ್ಣ ಪುಟ್ಟ ಕೆರೆಗಳ ಜೀರ್ಣೋದ್ಧಾರ ಕೆಲಸ ಅತ್ಯಗತ್ಯವಾಗಿ, ಅತಿ ತ್ವರಿತವಾಗಿ ಆಗಬೇಕಾಗಿದೆ. ತಾವು ಈಗ ನುಗು, ಭದ್ರಾ, ತುಂಗ, ತುಂಗಭದ್ರಾ ಪ್ರಾಜೆಕ್ಟ್‌ಗಳಿಗೆ ಎಷ್ಟುಮಟ್ಟಿಗೆ ಗಮನಕೊಡುತ್ತಿದ್ದೀರೋ ಅದೇ ರೀತಿ ಸಣ್ಣ ಪುಟ್ಟ ಕೆರೆಗಳ ಜೀರ್ಣೋದ್ಧಾರದ ಕಾರ್ಯದ ಕಡೆಗೂ ಗಮನಕೊಡಬೇಕಾದುದು ಅಗತ್ಯ. ದೇಶದ ಪ್ರಜೆಗಳಿಂದ ತಾವು ಈ ಬಾಬಿಗಾಗಿ ತೆರಿಗೆ ವಸೂಲು ಮಾಡುತ್ತಿರುವಾಗ ಅವರಿಗೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡುವುದೂ ತಮ್ಮ ಕರ್ತವ್ಯ. ಹಾಗಿಲ್ಲದೆ ಈ ರೀತಿ ವಸೂಲಾದ ತೆರಿಗೆಯ ಹಣವನ್ನೆಲ್ಲಾ 2-3 ಮೇಜರ್ ನೀರಾವರಿ ಕಾಮಗಾರಿಗಳಿಗಾಗಿ ಖರ್ಚುಮಾಡಿದರೆ ಜನರಲ್ಲಿ ಅತೃಪ್ತಿ, ಅಸಮಾಧಾನವುಂಟಾಗಲು ಕಾರಣವಾಗುತ್ತದೆ. ಈ ಬಗ್ಗೆ ನನ್ನ ಸಲಹೆಯೇನೆಂದರೆ, ತಾವು ನಿಗದಿಯಾದ ಯೋಜನೆಯೊಂದನ್ನು ಹಾಕಿಕೊಂಡು ಸಂಸ್ಥಾನಾದ್ಯಂತ ಎಷ್ಟು ಮೈನರ್ ಕೆರೆಗಳ ಜೀರ್ಣೋದ್ಧಾರವಾಗಬೇಕೆಂಬುದನ್ನು ಗೊತ್ತುಮಾಡಿಕೊಂಡು, ವರ್ಷಕ್ಕೆ ಇಷ್ಟು ಕೆರೆಗಳ ಜೀರ್ಣೋದ್ಧಾರ ಕಾರ್ಯ ಆಗಲೇಬೇಕೆಂಬ ಒಂದು ಕಟ್ಟುನಿಟ್ಟಾದ ಆಜ್ಞೆಯನ್ನು ಹೊರಡಿಸಿ ಅದರಂತೆ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗಬೇಕು. ಆಗಲೇ ಜನರ ಕಷ್ಟ ನಿವಾರಣೆಯಾಗಲು ಅನುಕೂಲ. ನಮ್ಮ ಮೈಸೂರು ಸಂಸ್ಥಾನದ ವೈಶಿಷ್ಟ್ಯವೆಂದರೆ ಒಂದು ಬಲೆಯೋಪಾದಿಯಲ್ಲಿ ಕೆರೆಗಳು ಅಲ್ಲಲ್ಲಿ ವಿಶೇಷವಾಗಿ ಹರಡಿಕೊಂಡಿರುವುದು. ಇದೇ ನಮ್ಮ ದೇಶದ ಸಂಪತ್ತು, ನಮ್ಮ ದೇಶದ ಅಭಿವೃದ್ಧಿಗೆ ಆಧಾರಸ್ತಂಭ. ಈ ಕೆರೆಗಳ ಜೀರ್ಣೋದ್ಧಾರ ಕಾರ್ಯದ ವಿಚಾರದಲ್ಲಿ ಸರ್ಕಾರದವರು ಉದಾಸೀನಮಾಡದೆ, ಅನಾದರಣೆ ತೋರದೆ ಅತಿ ತ್ವರಿತವಾಗಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ತಾವು ಸಂಸ್ಥಾನದಲ್ಲಿ ಈ Multi-purpose Co-operative Society ಗಳನ್ನು ಇಟ್ಟುಕೊಂಡು ಹೇಗೆ ಕೆಲಸಕಾರ್ಯಗಳನ್ನು ನಡೆಸುತ್ತಿದ್ದೀರೋ ಹಾಗೆಯೇ ಈ multi-purpose tanks ಕೆಲಸವೆಂಬುದನ್ನು ಮನಗಾಣಬೇಕು. ಈಗಿನ ಸ್ಥಿತಿ ನೋಡಿದರೆ ಈ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ಕೆ ತಾವು ಒದಗಿಸಿರುವ ಹಣವಾಗಲಿ ಅಥವಾ ಸಿಬ್ಬಂದಿಯಾಗಲಿ ಸಾಲದು. ಇಂಜಿನಿಯರನ್ನು ಕೇಳಿದರೆ ಏನು ಮಾಡುವುದು, ಸಿಬ್ಬಂದಿ ಸಾಲದು ಎಂದು ಹೇಳುತ್ತಾರೆ. ಕೆಲವು ಕಡೆಗಳಲ್ಲಿ ಹೆಚ್ಚು ಸಿಬ್ಬಂದಿ ಇದ್ದು ಕೆಲಸವೇ ಆಗಿರುವುದಿಲ್ಲ. ಸಂಸ್ಥಾನಾಮಳೆ ನಮ್ಮ ದೇಶದ ಅರ್ಥಿಕ ಸ್ಥಿತಿ ಈ ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯದ ಮೇಲೆ ನಿಂತಿದೆಯೆಂದು ಹೇಳಿದರೆ ತಪ್ಪಾಗಲಾರದು. ಈ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ಕಾಗಿ ಈಗ್ಗೆ 1-1½ ವರ್ಷದಿಂದ ಆರು ಲಕ್ಷ ರೂಪಾಯಿಗಳಷ್ಟು ಹಣವನ್ನೊದಗಿಸಿದ್ದರೂ ಸಹ ಆರು ರೂಪಾಯಿ ಸಹ ನಮ್ಮ ಜಿಲ್ಲೆಯಲ್ಲಿ ಖರ್ಚುಮಾಡಿಲ್ಲ. ಈ ಬಗ್ಗೆ ರೆವೆನ್ಯೂ ಡಿಪಾರ್ಟುಮೆಂಟಿಗೂ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೂ correspondence ಆಗಿಯೂ ಪ್ರಯೋಜನವಾಗಿಲ್ಲ. ಈ ವರ್ಷವಾದರೂ ಸಹ ಇದಕ್ಕೆ ಹಣವನ್ನೊದಗಿಸಿಕೊಟ್ಟು ಈ ಕೆರೆಗಳ ಜೀರ್ಣೋದ್ಧಾರ ಕಾರ್ಯ ಯಶಸ್ವಿಯಾಗಿ ಆಗುವಂತೆ ಮಾಡಬೇಕೆಂದು ಹೇಳಿ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಈ ಕೆರೆಗಳ ಅವಶ್ಯಕತೆ ನಮ್ಮ ದೇಶಕ್ಕೆ ಎಷ್ಟರ ಮಟ್ಟಿಗಿದೆ ಎಂಬುದನ್ನು ಶ್ರೀ ಜಿ. ಎ. ತಿಮ್ಮಪ್ಪ ಗೌಡರು ಈಗ ತಾನೇ ಹೇಳಿರುತ್ತಾರೆ. ಹಿಂದೆ ಬನವಾಸಿಯ ವಿಚಾರವಾಗಿ ಪಂಪನ ಕಾಲದ ವರ್ಣನೆಯನ್ನು ಓದಿದರೆ ಆ ಕಾಲದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಎಂತಹ ಕೆರೆ ಇತ್ತು, ಆ ಕೆರೆಯಲ್ಲಿ ಯಾವ ರೀತಿ ತಾವರೆ ಹೂವುಗಳು, ಹಂಸಪಕ್ಷಿಗಳಿದ್ದುವು ಎಂಬುದರ ಬಗ್ಗೆ ದೇಶದ ಗ್ರಾಮ ಜೀವನವನ್ನು ವರ್ಣಿಸಿರು

(ಶ್ರೀ ಎಸ್. ಗೋಪಾಲಗೌಡ.)

ವುದು ಗೊತ್ತಾಗುತ್ತದೆ. ಅಲ್ಲದೆ, ಬದನೂರು ಮತ್ತು ಕೆಳಧಿ ಸಂಸ್ಥಾನಗಳಲ್ಲಿ ಶಿವಪ್ಪನಾಯಕರ ಆಳ್ವಿಕೆಯ ಕಾಲದಲ್ಲಿ ಈ ಕೆರೆ ಕಾಮಗಾರಿಗಳು ಹೆಚ್ಚಾಗಿ ನೆರವೇರಿರುವುದು ಇಂದಿಗೂ ಚಾರಿತ್ರಕ ಅಂಶಗಳಿಂದ ತಿಳಿದುಬರುತ್ತದೆ. ಆಗ ರಿಪೇರಿಯಾದ ಕೆರೆಗಳು ಇನ್ನೂ ಅಚ್ಚಳಿಯದೆ ಇವೆ. ಅಂಥ ಕೆರೆಗಳನ್ನು ಈಗ ಕಟ್ಟಿಸಲು 50 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಈಗಿನ ಕಾಲದ ಕೆಲವು ಕೆರೆಗಳನ್ನು ನೋಡಿದರೆ ಜೊಂಡು ಬೆಳೆದು ಅವುಗಳಲ್ಲಿ ನೀರು ಇದೆಯೋ ಅಥವಾ ಇಲ್ಲವೋ ಎಂಬುದು ಸಹ ಕಾಣುತ್ತಿಲ್ಲ. ಕೆಲವು ಕೆರೆಗಳ ಸ್ಥಿತಿಯನ್ನು ನೋಡಿದರೆ ಅಲ್ಲಲ್ಲಿ ಬಿದಿರು ಮೆಳೆಗಳು ಬೆಳೆದಿರುವುದು, ಒಡೆದುಹೋಗಿರುವುದು, ಕಲ್ಲು ಧಿಬ್ಬಗಳು ಕಳಚಿಬಿದ್ದಿರುವುದು, ಈ ರೀತಿ ಯಾವುದೂ ನರಿಯಾಗಿಲ್ಲದೆ ಅವಶೇಷ ಅಲ್ಲಲ್ಲಿ ಕಾಣುತ್ತಿದೆ. ಸರ್ಕಾರವೇ ಆಗಲಿ ಅಥವಾ ಸಂಬಂಧಪಟ್ಟ ಇಲಾಖೆಯವರಾಗಲಿ ಇದನ್ನು ಮುತುವರ್ಜಿಯಿಂದ ಉತ್ತಮ ರೀತಿಯಲ್ಲಿಟ್ಟುಕೊಳ್ಳಲು ಪ್ರಯತ್ನಪಟ್ಟಿಲ್ಲ. ಎಡನೆಯದಾಗಿ, ಗ್ರಾಮಸ್ಥರೂ ಸಹ ಹೆಚ್ಚಿನ ಪ್ರಯತ್ನಪಟ್ಟಿಲ್ಲ. ಹೀಗಾಗಿ ಮಲೆನಾಡು ಪ್ರದೇಶದಲ್ಲಿ ಹಲವಾರು ಕೆರೆಗಳು ಬಹಳ ಹೀನಸ್ಥಿತಿಯಲ್ಲಿವೆ. ಬಯಲು ಸೀಮೆಯ ಕೆರೆಗಳಿಗೂ ಮಲೆನಾಡು ಕೆರೆಗಳಿಗೂ ಮೂಲಭೂತವಾದ ಕೆಲವು ವ್ಯತ್ಯಾಸಗಳಿವೆ. ಬಯಲು ಸೀಮೆಯಲ್ಲಿ ಮಳೆಗಳ ನೀರಿನಿಂದ ಕೆರೆಗಳು ತುಂಬರುತ್ತವೆ; ಮಲೆನಾಡು ಸೀಮೆಯಲ್ಲಿ ಜಲಭರಿತವಾದ ಮಣ್ಣಿನಿಂದ ಕೆರೆ ತುಂಬರುತ್ತದೆ. ಎರಡಕ್ಕೂ ಒಂದೇ ಮಾರ್ಗ ಆಗುವುದಿಲ್ಲ. ಇಂದು ಮಲೆನಾಡು ಕೆರೆಗಳ ದುರಸ್ತಿ ಬಗ್ಗೆ ಸರ್ಕಾರದವರು ಸಾಕಷ್ಟು ಗಮನಕೊಟ್ಟಿಲ್ಲ. ಹಾಗೆ ಕೊಡದೇ ಇರುವುದರಿಂದ ಆ ಕೆರೆಗಳು ಅಪ್ಪಾಗಿ ಜನತೆಗೆ ಉಪಯೋಗವಾಗುತ್ತಿಲ್ಲ. ಆ ಕೆರೆಗಳನ್ನು ಯಾರು ನೋಡಬೇಕು, ಅಲ್ಲಿಯ ನೀರನ್ನು ಯಾವ ರೀತಿ ಉಪಯೋಗಿಸಬೇಕು ಎಂಬುದನ್ನು ನೋಡಿಕೊಳ್ಳಲು ಯಾರೂ ಇಲ್ಲ. ಬೇರೆ ಕಡೆಗಳಲ್ಲಾದರೋ ನೀರುಗಂಟಿಗಳಿದ್ದಾರೆ. ಮಲೆನಾಡಿನಲ್ಲಿ ಈ ವ್ಯವಸ್ಥೆ ಇಲ್ಲ. ಸರ್ಕಾರದವರು ಇದನ್ನು ಗಮನಿಸಿ ಈ ಬಗ್ಗೆ ಒಂದು ಸುವ್ಯಸ್ಥಿತವಾದ ಏರ್ಪಾಡನ್ನು ಇನ್ನು ಮುಂದಾದರೂ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡೆ).—ಮಲೆನಾಡು ಪ್ರದೇಶದಲ್ಲಿ river and river project ಇದೆ—ಹಿರೇ ಭಾನ್ಕರ್‌ನಂತಹ ದೊಡ್ಡ ಜಲಾಶಯವಿದೆ. ಅದೇ ನಮ್ಮ ಕೋಲಾರ ದಲ್ಲಾದರೋ ಏನೂ ಇಲ್ಲ. We entirely depend upon these tanks. We have no rivers.....ಆದರೂ ಮುಕ್ಯಾಲುವಾಸಿಯೆಲ್ಲಾ ಹಿಂದೆ ಹಳೆಯ ಕಾಲದಲ್ಲಿ ಕಟ್ಟಿಸಿದ ಕೆರೆಗಳೇ ಇವೆ. ಅವೂ ಸಹ ಸರಿಯಾದ ಸ್ಥಿತಿಯಲ್ಲಿಲ್ಲ. ಸರ್ಕಾದವರು ಇದಕ್ಕೆ ನಿಗಾಕೊಡಬೇಕಾದುದು ಅತ್ಯಗತ್ಯ. ಏಕೆಂದರೆ ನಾವುಗಳು ಇದಕ್ಕಾಗಿ ಸರ್ಕಾರಕ್ಕೆ ಯಥೇಚ್ಛವಾಗಿ ಟ್ಯಾಕ್ಸ್ ಕೊಡುತ್ತಿದ್ದೇವೆ. ಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಕೆರೆಗಳ ಜೀರ್ಣೋದ್ಧಾರ ಕಾರ್ಯ ಅತಿ ತ್ವರಿತವಾಗಿ ಅತ್ಯಗತ್ಯವಾಗಿ ಆಗಬೇಕಾಗಿದೆ. ಅಲ್ಲಿಯವರಿಗೆ ಯಾವ ವಿಧವಾದ ಅನುಕೂಲತೆಯೂ ಇಲ್ಲ. ಅಲ್ಲಿ ಮಳೆ ಬಂದು ಕೆರೆಗಳು ತುಂಬಬೇಕು. ಈ ರೀತಿಯ ಪರಿಸ್ಥಿತಿ ಅಲ್ಲರುವಾಗ ಸರ್ಕಾರದವರು ಇಲ್ಲಿಯ ಕೆರೆಗಳ ಜೀರ್ಣೋದ್ಧಾರ ಕಾರ್ಯದ ಬಗ್ಗೆ first priority ಕೊಡಬೇಕೆಂದು ಹೇಳಿ ನಾನು ಈ ಜೋತಾ ಸೂಚನೆಗೆ ನನ್ನ ಬೆಂಬಲಕೊಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅಧ್ಯಕ್ಷರೇ, ಸಂಸ್ಥಾನದಲ್ಲಿ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರುವಂತೆ ಸುಮಾರು 24 ಸಾವಿರ ಕೆರೆಗಳಿವೆ. ಅವುಗಳ ಹೈಕಿ ಅರ್ಧ ಭಾಗದ ಕೆರೆಗಳು ಸರಿಯಾದ ಸ್ಥಿತಿಯಲ್ಲಿಲ್ಲ. ಶ್ರೀ ಎಸ್. ಗೋಪಾಲಗೌಡರು ಮತ್ತು ಶ್ರೀ ಜಿ. ವಿ. ತಿಮ್ಮಪ್ಪಗೌಡರು ಹೇಳಿದಹಾಗೆ, ಮಲೆನಾಡಿನಲ್ಲಿ ಅನೇಕ ಕೆರೆಗಳು ನಾದುರಸ್ತಾಗಿವೆ; ಅವುಗಳ ಜೀರ್ಣೋದ್ಧಾರ ಅಗತ್ಯ. ಮಲೆನಾಡು ಕೆರೆಗಳ ಜೀರ್ಣೋದ್ಧಾರದ ಕಾರ್ಯಾಧ ಬಗ್ಗೆ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದಾಗ ಮೈನರ್ ಟ್ಯಾಂಕ್ restoration range ಒಂದನ್ನು ಏರ್ಪಡಿಸಿದ್ದರು. ಆಗ ಸ್ವಲ್ಪ ಕೆಲಸವಾಯಿತು. ಅನಂತರ ನಮ್ಮ ಕಾಲದಲ್ಲಿ ಮಲೆನಾಡು ಕೆರೆಗಳ ಜೀರ್ಣೋದ್ಧಾರ ಕಾರ್ಯ ಅಷ್ಟು ಆಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳಬೇಕಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಬಗ್ಗೆ ಬಹು ಮಟ್ಟಿಗೆ ಕೆಲಸ ಕಾರ್ಯಗಳು pending ನಲ್ಲಿವೆಯಲ್ಲವೇ?

ಅಧ್ಯಕ್ಷರು.—ಈ ಮಧ್ಯೆ ನಾಲ್ಕು ವರ್ಷಗಳಿಂದ ಅಷ್ಟಾಗಿ ಕೆಲಸವಾಗಿಲ್ಲವೆಂದು ಅವರೇ ಹೇಳಿರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಕಾಲದಲ್ಲಿ ಮಲೆನಾಡಿನಲ್ಲಿ ಕೆಲಸ ಹೆಚ್ಚಾಗಿ ಆಗಿಲ್ಲವೆಂದು ಈಗ ತಾನೇ ಹೇಳಿದೆ. ಮಲೆನಾಡಿನಲ್ಲಿ ಬಹಳ ತೊಂದರೆ ಇದೆ. ಕಂಟ್ರಾಕ್ಟರುಗಳು ಸಿಕ್ಕುವುದು ಕಷ್ಟ. ಆಮೇಲೆ ಕೆರೆಗಳ ಹೂಳು ತೆಗೆಯುವುದು (desilting of tanks) ಒಂದು ದೊಡ್ಡ ಕೆಲಸ. ಒಂದು ಕೆರೆಯ ಹೂಳನ್ನು ಸಮರ್ಪಕವಾಗಿ ತೆಗೆಯಬೇಕಾದರೆ ಬಹಳ ಹಣ ಖರ್ಚಾಗುತ್ತದೆ. ಇಷ್ಟು ಖರ್ಚು ಮಾಡುವುದು ಯೋಗ್ಯವೇ, ಸೂಕ್ತವೇ, ಆದಕ್ಕೆ ಹಣವನ್ನು ಎಲ್ಲಿಂದ ಒದಗಿಸುವುದು ಎಂಬುದನ್ನು ಯೋಚಿಸಬೇಕು.

ಶ್ರೀ ಎಲ್. ಸಿದ್ದಪ್ಪ.—ಎಲ್ಲಿ ಅವಶ್ಯಕತೆ ಅಷ್ಟು ಇಲ್ಲವೋ ಅಲ್ಲಿ ಖರ್ಚು ಮಾಡುತ್ತಿದ್ದೀರಿ. ಈಗ ಸುಮಾರು 90 ಸಾವಿರ ರೂಪಾಯಿಗಳಷ್ಟು ಈ ಬಾಬುಗಾಗಿ ಮೈದಾನ ಸೀಮೆಯಲ್ಲಿ ಖರ್ಚಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಬಿ. ವಿ. ನಾರಾಯಣ ರೆಡ್ಡಿಯವರು ಹೇಳಿದರು, ಕೋಲಾರ ಜಿಲ್ಲೆಯಲ್ಲಿ ಕೆರೆಗಳ ಜೀರ್ಣೋದ್ಧಾರ ಅಷ್ಟಾಗಿ ಆಗಿಲ್ಲ ಎಂದು. ಆ ರೀತಿ ಕೋಲಾರ ಜಿಲ್ಲೆಯ ವಿಚಾರದಲ್ಲಿ ಅವರು ಹೇಳುವ ಹಾಗಿಲ್ಲ. We have done our best in this matter so far as Kolar is concerned and also in Tumkur District.

ಶ್ರೀ ಬಿ. ವಿ. ನಾರಾಯಣರೆಡ್ಡಿ.—20—30 ವರ್ಷಗಳ ಹಿಂದೆ ಆದ ಪ್ರಾಜೆಕ್ಟ್ ಇನ್ನೂ ರಿಪೇರಿ ಆಗದೇ ಇರುವ ಅಂಶ ತಮಗೆ ಗೊತ್ತೇ?

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟಿನಲ್ಲಿ, ಈ ಕೆರೆಗಳ ಜೀರ್ಣೋದ್ಧಾರದ ಕಾರ್ಯದ ಅವಶ್ಯಕತೆ ಇದೆಯೆಂಬುದು ಸರ್ಕಾರಕ್ಕೆ ಗೊತ್ತು. ಅದನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ಸರ್ಕಾರದವರು ತೀವ್ರಾಲೋಚನೆ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಅತ್ಯಗತ್ಯವಾಗಿ, ಅತಿತ್ವರಿತವಾಗಿ ಈ ಕೆರೆಗಳ ಜೀರ್ಣೋದ್ಧಾರದ ಕಾರ್ಯ ಆಗಬೇಕಾಗಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಾರೆಂಬ ಭರವಸೆಯನ್ನು ಕೊಡುತ್ತೇನೆ.

Sri G. A. THIMMAPPA GOWDA.—I seek the leave of the House to withdraw the cut motion.

The cut motion was, by leave, withdrawn.

4 P.M.

Mr. SPEAKER.—The question is.—

"That a sum not exceeding Rs. 61,09,000 be granted to the Government to defray the charges which will come in course of payment during the year ending 21st day of March 1955, in respect of Other Revenue Expenditure financed from Ordinary Revenue."

The motion was adopted.

DEMAND No. 9—IRRIGATION

19. CONSTRUCTION OF IRRIGATION, NAVIGATION, EMBANKMENT AND DRAINAGE WORKS.

Mr. SPEAKER.—Motion moved:

"That a sum not exceeding Rs. 16,89,000 be granted to the Government to defray the charges which will come in course of payment during the year ending 31st day of March 1955, in respect of 'Construction of Irrigation, Navigation, Embankment and Drainage Works.'"

Branch Channel of Sree Ramadevara Channel in Uganahalli, Krishnarajapet Taluk.

Sri S. M. LINGAPPA (Krishnarajapet).—Sir, I beg to move:

"That the demand under the head '19. Construction of Irrigation, Navigation, Embankment and Drainage Works' for Rs. 16,89,000 be reduced by Rs. 100 (to urge upon the Government the necessity of undertaking excavating work relating to the branch channel of Sree Ramadevara Channel in Uganahalli, Krishnarajapet Taluk)."

ಸ್ವಾಮಿ, ಈ ಪ್ರಾಜೆಕ್ಟಿನ ಸರ್ವೇ ಮತ್ತು ಅಂದಾಜು ಗಳು ಈಗ್ಯೆ 10 ವರ್ಷಗಳ ಹಿಂದೆ ಸರ್ಕಾರದಿಂದ ತಯಾರಿಸಲ್ಪಟ್ಟು ಈ ಕಾಲದವರೆಗೂ ಈ ಪ್ರಾಜೆಕ್ಟನ್ನು ಏತಕ್ಕಾಗಿ ಸರ್ಕಾರದವರು ತೆಗೆದುಕೊಳ್ಳಲಿಲ್ಲವೋ ನಮಗಂತೂ ಅರ್ಥವಾಗುವುದಿಲ್ಲ. ಈ ಪ್ರದೇಶದಲ್ಲಿ ಯಾವ ಮೈನರ್ ಅಥವಾ ಮೇಜರ್ ಕೆರೆಗಳಾಗಲೆ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಮಳೆಯ ಅಭಾವದಿಂದ ಈ ಪ್ರದೇಶಗಳು ದುರ್ಭಿಕ್ಷಕ್ಕೆ ಒಳಗಾಗಿ ಜನರು ಬಹಳ ಕಂಗೆಟ್ಟಿದ್ದಾರೆ. ಅವರ ಆರ್ಥಿಕ ಸ್ಥಿತಿ ಬಹಳ ಕೆಳಮಟ್ಟದಲ್ಲಿದೆ. ಅಲ್ಲಿರತಕ್ಕ ಜನರೆಲ್ಲರೂ ಬೇಸಾಯವನ್ನೇ ನಂಬಿಕೊಂಡಿರತಕ್ಕವರು; ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಈ ಪ್ರಾಜೆಕ್ಟಿನ ಅವಶ್ಯಕತೆ ಇಂದು ಹೆಚ್ಚಾಗಿದೆ. ಇದಕ್ಕೆ ಸರ್ಕಾರದಲ್ಲಿ ಹತ್ತಾರು ವರ್ಷಗಳಿಂದಲೂ ಕೂಡ ಅನೇಕ ಮನವಿ ಗಳನ್ನು ರೈತರು ಸಲ್ಲಿಸಿದ್ದಾರೆ. ನಮ್ಮ ಮೈಸೂರು ಸರ್ಕಾರಕ್ಕೂ ಮದರಾಸು ಸರ್ಕಾರಕ್ಕೂ ಆಗಿರತಕ್ಕ ಒಪ್ಪಂದದ ಪ್ರಕಾರ ಈ ನಾಲಾಬಡಾವಣೆಯಿಂದ ಇನ್ನೂ 3,000 ಎಕರೆಗೆ ನೀರನ್ನು ಒದಗಿಸಲು ಅವ ಕಾಶವಿದೆ. ಆದ್ದರಿಂದ ಸರ್ಕಾರದವರು ಈ ಯೋಜನೆ ಯನ್ನು ಕೂಡಲೆ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಈ ಖೋತಾ ನಿರ್ಣಯವನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

"That the demand under the head be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪ.—ಈ ಅಣೆಕಟ್ಟಿನ ಸಂಬಂಧವಾಗಿ ಯಾವ ಪರಿಶೀಲನೆಯೂ ನಡೆದಿಲ್ಲ. ಪರಿಶೀಲನೆ ಮಾಡುತ್ತೇವೆ. ನಮಗೆ ಬಂದಿರತಕ್ಕ ವರದಿ ಪ್ರಕಾರ ಪರಿಶೀಲನೆ ನಡೆದಿಲ್ಲ.

ಶ್ರೀ ಎಸ್. ಎಂ. ಲಿಂಗಪ್ಪ.—ಅಂದಾಜು ಆಗಿರು ವುದು ಗೊತ್ತೇ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ನನ್ನ ಗಮ ನಕ್ಕೆ ಬಂದಿಲ್ಲ; ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಎಂ. ಲಿಂಗಪ್ಪ.—ಮಾನ್ಯ ಸಚಿವರ ಭರವಸೆಯ ಮೇಲೆ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಿಕ್ಕೆ ಸಭೆಯ ಅನುಮತಿಯನ್ನು ಬೇಡುತ್ತೇನೆ.

Cut motion was, by leave, withdrawn.

Repair of Tanks in Pandavapura Taluk.

ಶ್ರೀ ಬಿ. ಮೈ. ನೀಲೇಗೌಡ (ಪಾಂಡವಪುರ).—ಸ್ವಾಮಿ, ನನ್ನ ಖೋತಾ ನಿರ್ಣಯವನ್ನು ಮಂಡಿಸು ತ್ತೇನೆ. ಇದು ಈ ರೀತಿ ಇದೆ:—

"ನೀರಾವರಿ ಕಾಂಗಾರಿಗಳು, ನೀರಿನ ಮೇಲಿನ ಸಂಚಾರ ಸಂಬಂಧದ ಕಾಂಗಾರಿಗಳು, ಕಟ್ಟೆ ಕಾಂಗಾರಿಗಳು ಮತ್ತು ಜಲಮಾರ್ಗಗಳ ಕಾಂಗಾರಿ ಗಳ ಕೆಲಸಗಳು" ಎಂಬ ಬಾಬಿನಲ್ಲಿ ಕೋರಿರತಕ್ಕ 16,89,000 ರೂಪಾಯಿಗಳು 'ಡಿಮ್ಯಾಂಡ್' ಮನ ವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಿಮೆ ಮಾಡಬೇಕು. (ಪಾಂಡವಪುರ ತಾಲ್ಲೂಕಿನಲ್ಲಿ ಕೆರೆಗಳ ಜೀರ್ಣೋದ್ಧಾರದ ಅವಶ್ಯಕತೆಯ ವಿಚಾರದಲ್ಲಿ ಒಂದು ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ).